೧೧.೦೦ ಎ. ಎಂ.

(೫) ರಾಜ್ಯದಲ್ಲಿರುವ ನಿರುದ್ಯೋಗ ಸಮಸ್ಯೆಯ ಪರಿಹಾರದ ಬಗ್ಗೆ

ಶ್ರೀ ಬಿ. ಆರ್. ನಿಲಕಂಠಪ್ಪ.—ಮಾನ್ಯ ಅಧ್ಯಕ್ಷರೆ,

(ಎ) ದಿನಾಂಕ ೩೧-೮-೧೯೮೬ಕ್ಕೆ ಇರುವ ರಾಜ್ಯ ನೌಕರರ ಸಂಖ್ಯೆ ಎಷ್ಟು ?

(ಬಿ) ಜನತಾ ಸರ್ಕಾರ ಬಂದ ಈ ೪ ವರ್ಷ ಅವಧಿಯಲ್ಲಿ ಎಷ್ಟು ಜನರಿಗೆ ನೌಕರಿ ಕೊಟ್ಟಿದ್ದಾರೆ ?

(ಸಿ) ರಾಜ್ಯದಲ್ಲಿರುವ ನಿರುದ್ಯೋದ ಪದವಿಧರರ ಮತ್ತು ಎಸ್.ಎಸ್.ಎಲ್.ಸಿ. ಸರಿಸಮಾನ ಪಾಸಾದವರ ಒಟ್ಟು ಸಂಖ್ಯೆ ಎಷ್ಟು ?

(ಡಿ) ನಿರುದ್ಯೋಗ್ಯ ನಿವಾರಣೆಗೆ ಜನತಾ ಸರ್ಕಾರವು ಏನಾದರೂ ವಿಶೇಷ ರೀತಿಯ ಯೋಜನೆಯನ್ನು ರೂಪಿಸಿದೆಯೆ ?

ಶ್ರೀ ಎಂ. ರಘುಪತಿ.—ಈ ನಿರುದ್ಯೋಗ್ಯ ನಿವಾರಣೆ ಬಗ್ಗೆ ಮಾನ್ಯ ಸದಸ್ಯರು ಬೇರೆ ನೋಟೀಸ್ ಕಳಿಸಿದರೆ ಒಳ್ಳೆಯದು ಎಂದು ನನ್ನ ಅಭಿಪ್ರಾಯ.

(೬) ಉಡುಪಿ ಮತ್ತು ಮಂಗಳೂರಿನ ಆಸ್ಪತ್ರೆಗೆ ಡೆಪ್ಯೂಟಿ ಡೆಂಟಲ್ ಸರ್ಜನ್‌ಗಳ ಹುದ್ದೆಯನ್ನು ನೀಡುವುದು

ಶ್ರೀ ಬ್ಲೇಸಿಯಸ್ ಎಂ. ಡಿಸೋಜ.—ಕರ್ನಾಟಕ ಸರ್ಕಾರ ೨೪-೩-೧೯೮೬ರಲ್ಲಿ ರಾಜ್ಯದ ೩೩ ಅಸಿಸ್ಟೆಂಟ್ ಡೆಂಟಲ್ ಸರ್ಜನ್‌ಹುದ್ದೆಗಳನ್ನು ಡೆಪ್ಯೂಟಿ ಡೆಂಟಲ್ ಸರ್ಜನ್ ಹುದ್ದೆಗಳಾಗಿ ಬಡ್ತಿ ನೀಡಿತು. ಜಿಲ್ಲಾ ಆಸ್ಪತ್ರೆಗಳಲ್ಲಿ ಕೆಲವು ಕಡೆ ಮಾತ್ರ ಬಡ್ತಿ ನೀಡಲಾಗಿದೆ. ಬೆಂಗಳೂರಿನಲ್ಲಿ ಇಂತಹ ೨ಳು ಹುದ್ದೆಗಳನ್ನು ನಿರ್ಮಿಸಲಾಗಿದೆ. ನಾಲ್ಕು ಸಂಚಾರಿ ಆಸ್ಪತ್ರೆಗಳಿಗೂ ಈ ಸವಲತ್ತು ಇದೆ. ಸಾಗರ ಹೊಸಪೇಟೆ, ಸಕಲೇಶಪುರಗಳಲ್ಲಿರುವ ಜನರಲ್ ಆಸ್ಪತ್ರೆಗಳಿಗೂ ಈ ಸವಲತ್ತು ಇದೆ. ಆದರೆ ದಕ್ಷಿಣ ಕನ್ನಡ ಜಿಲ್ಲೆಯನ್ನು ಈ ವಿಚಾರದಲ್ಲಿ ಪೂರ್ತಿ ಅಲಕ್ಷಿಸಲಾಗಿದೆ. ಮಂಗಳೂರಿನ ಜಿಲ್ಲಾ ಆಸ್ಪತ್ರೆ ಹಾಗೂ ಉಡುಪಿಯ ಸರಕಾರಿ ಆಸ್ಪತ್ರೆಗಳಿಗೆ ಈ ಡೆಪ್ಯೂಟಿ ಸರ್ಜನ್ ಹುದ್ದೆಗಳನ್ನು ನೀಡಬೇಕು. ಆದ ಅನ್ಯಾಯ ಸರಿಪಡಿಸಬೇಕು ಎಂದು ಒತ್ತಾಯಿಸುತ್ತೇನೆ.

SRI B. RACHAIAH.—The Government has upgraded 33 posts of Assistant Dental Surgeons as Deputy Dental Surgeons *Vide* Order dated 24-3-1986. These posts are alloted to different hospitals throughout the State. However, the posts of Assistant Dental Surgeons in Wenlock Hospital, Mangalore were not upgraded as Deputy Dental Surgeons since there is already a post of a Dental Surgeon. The request for upgrading a post of Assistant Dental Surgeon in Udupi Hospital will be considered.

೭) ರಾಜ್ಯದಲ್ಲಿರುವ ಆರೋಗ್ಯ ಘಟಕಗಳನ್ನು ಆರೋಗ್ಯ ಉಪ ಘಟಕಗಳನ್ನಾಗಿ ಮಾಡಿರುವುದರಿಂದ ತೊಂದರೆಯಾಗಿರುವುದು

ಶ್ರೀ ಪ್ರತಾಪಚಂದ್ರ ಶೆಟ್ಟಿ.—ರಾಜ್ಯದಲ್ಲಿ ಪ್ರಾಥಮಿಕ ಆರೋಗ್ಯ ಘಟಕಗಳನ್ನು ಆರೋಗ್ಯ ಕೇಂದ್ರಗಳನ್ನಾಗಿ ಬಡ್ತಿ ಮಾಡುತ್ತಿರುವುದು ಮತ್ತು ಪ್ರಾಥಮಿಕ ಆರೋಗ್ಯ ಘಟಕಗಳನ್ನು ಉಪ ಆರೋಗ್ಯ ಘಟಕಗಳನ್ನಾಗಿ ಹಿಂಬಡ್ತಿ ಮಾಡುತ್ತಿರುವ ವಿಚಾರ ಜಿಲ್ಲಾ ಪರಿಷತ್ತಿನ ಮುಖಾಂತರ ಗಮನಕ್ಕೆ ಬಂದಿರುತ್ತದೆ. ಈ ಪ್ರಾಥಮಿಕ ಆರೋಗ್ಯ ಘಟಕಗಳನ್ನು ಆರೋಗ್ಯ ಉಪ ಘಟಕಗಳನ್ನಾಗಿ ಮಾಡುವುದರ ಉದ್ದೇಶವೇನು ? ಸರಕಾರದ ಈ ನೀತಿಗೆ ಕಾರಣವೇನು ? ಇದರಿಂದ ಸಾರ್ವಜನಿಕರಿಗೆ ತೊಂದರೆ ಇಗುವುದಿಲ್ಲವೇ ? ಈ ವಿಚಾರದಲ್ಲಿ ಸರಕಾರದ ಸ್ಪಷ್ಟ ನೀತಿಯನ್ನು ಸದನದ ಮುಖಾಂತರ ಕೇಳಬಯಸುತ್ತೇನೆ.